**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಚಿಂತಾಮಣಿ.**

**ಸಿ.ಸಿ.ನಂ.526/2020**

**ಫಿರ್ಯಾದುದಾರರು** : ಚಿಂತಾಮಣಿ ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

**ಆರೋಪಿತರು** :

1. ಬೈಯಣ್ಣ ಬಿನ್ ಈರಪ್ಪ,
   ವಯಸ್ಸು 45 ವರ್ಷ,

2. ಲಕ್ಷ್ಮೀದೇವಮ್ಮ ಕೋಂ ಬೈಯಣ್ಣ,
   ವಯಸ್ಸು 40 ವರ್ಷ,

ಆರೋಪಿ 1 ಮತ್ತು 2 ರವರ
ವಾಸಃ ಕರಡಿಗುಟ್ಟ ಗ್ರಾಮ,
ಚಿಂತಾಮಣಿ ತಾಲ್ಲೂಕು,
ಚಿಕ್ಕಬಳ್ಳಾಪುರ ಜಿಲ್ಲೆ.

: **ದೋಷಾರೋಪಣೆ** :

ಶ್ರೀಮತಿ ಹರ್ಷಿತ., ಬಿ.ಎ., ಎಲ್‌ಎಲ್.ಬಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ಚಿಂತಾಮಣಿ, ಆದ ನಾನು ಆರೋಪಿತರಾದ ನಿಮ್ಮ ಮೇಲೆ ಆರೋಪ ಹೊರಿಸುವುದೇನೆಂದರೆ,

ದಿನಾಂಕಃ **04-04-2020** ರಂದು ಸಂಜೆ **05-30** ರ ಸಮಯದಲ್ಲಿ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕರಡಿಗುಟ್ಟ ಗ್ರಾಮದ ಆರೋಪಿತರ ಜಮೀನಿನ ಪಕ್ಕದಲ್ಲಿರುವ ರಸ್ತೆಯಲ್ಲಿ ಚಾಸಾ-**1** ರವರು ತನ್ನ ಬಾಬತ್ತು ದ್ವಿಚಕ್ರ ವಾಹನದಲ್ಲಿ ತಮ್ಮ ಜಮೀನಿನ ಬಳಿ ಹೋಗುತ್ತಿದ್ದಾಗ, ಆರೋಪಿತರಾದ ನೀವುಗಳು ಹಳೇ ವೈಷಮ್ಯದ ಹಿನ್ನಲೆಯಲ್ಲಿ ಸಮಾನ ಉದ್ದೇಶದಿಂದ ಚಾಸಾ-**1** ರವರ ಮೇಲೆ ಜಗಳ ತೆಗೆದು ನೀನು ಮ್ಮ ಜಮೀನಲ್ಲಿ ಹಾದು ಹೋಗಿರುವ ದಾರಿಯಲ್ಲಿ ಹೋಗಬಾರದು ಲೋಫರ್ ನನ್ನ ಮಗನೇ ಅಲಕಾ ನನ್ನ ಮಗನೇ ಎಂದು ಅವ್ಯಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕರ ನೆಮ್ಮದಿಗೆ ಶಾಂತಿ ಭಂಗವನ್ನುಂಟು ಮಾಡಿರುತ್ತೀರಿ, ಆ ಮೂಲಕ ನೀವು **ಭಾರತ ದಂಡ**

**ಸಂಹಿತೆ ಕಲಂ 504 ಸಹವಾಚಕ ಕಲಂ 34 ಐಪಿಸಿ** ರಡಿಯಲ್ಲಿ ಅಪರಾಧ ಮಾಡಿರುವುದಾಗಿ ಆಪಾದಿಸಲಾಗಿದೆ.

**ಎರಡನೇಯದಾಗಿ,** ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಅದೇ ಸಂಬಂಧವಾಗಿ 1 ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಅಲ್ಲಿಯೇ ಬಿದ್ದಿದ್ದ ಕಲ್ಲಿನಿಂದ ಚಾಸಾ-1 ರವರ ಎಡಕೆನ್ನೆಗೆ ಹೊಡೆದು ಸಾಮಾನ್ಯ ಸ್ವರೂಪದ ತರಚಿದ ಗಾಯವನ್ನುಂಟು ಮಾಡಿರುತ್ತೀರಿ, ಆ ಮೂಲಕ ನೀವು **ಭಾರತ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34 ಐಪಿಸಿ** ರಡಿಯಲ್ಲಿ ಅಪರಾಧ ಮಾಡಿರುವುದಾಗಿ ಆಪಾದಿಸಲಾಗಿದೆ.

**ಕೊನೇಯದಾಗಿ,** ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಅದೇ ಸಂಬಂಧವಾಗಿ 2 ನೇ ಆರೋಪಿಯಾದ ನೀವು ಕೈಗಳಿಂದ ಚಾಸಾ-1 ರವರ ಮೈ ಮೇಲೆ ಹೊಡೆದು, ಕೈಯನ್ನು ಹಿಡಿದು ಎಳೆದಾಡಿ ಮೈಕೈ ನೋವುಂಟು ಮಾಡಿರುತ್ತೀರಿ, ಆ ಮೂಲಕ **ಭಾರತ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ಐಪಿಸಿ** ರಡಿಯಲ್ಲಿ ಅಪರಾಧ ಮಾಡಿರುವುದಾಗಿ ಆಪಾದಿಸಲಾಗಿದೆ.

ಸದರಿ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಆರೋಪಿಗಳ ವಿಚಾರಣೆಯನ್ನು ನನ್ನ ಹಾಜರಾತಿಯಲ್ಲಿ ತೆಗೆದುಕೊಂಡು, ಆಪಾಧಾನೆಗಳನ್ನು ಅವರಿಗೆ ವಿವರವಾಗಿ ಓದಿ ಹೇಳಿದ ಮೇಲೆ ಅದನ್ನು ನನ್ನ ವೈಯಕ್ತಿಕ ಸುನಾವಣೆಯಲ್ಲಿ ದಾಖಲಿಸಿದ್ದು ಆಪಾಧನೆಗಳು ಪೂರ್ಣಶಃ ಸರಿಯಾದ ಹೇಳಿಕೆಯಾಗಿದೆ.)

**ಸ್ಥಳಃ ಚಿಂತಾಮಣಿ.**
**ದಿನಾಂಕಃ** 18-06-2025.

**ಸಹಿ/-**
**(ಶ್ರೀಮತಿ ಹರ್ಷಿತ)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚಿಂತಾಮಣಿ.**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಚಿಂತಾಮಣಿ.**

**ಸಿ.ಸಿ.ನಂ. 526/2020**

**ಫಿರ್ಯಾದುದಾರರುಃ** ಸರ್ಕಾರದ ಪರವಾಗಿಃ

ಚಿಂತಾಮಣಿ ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

**ಆರೋಪಿಃ** 1. ಬೈಯಣ್ಣ ಬಿನ್ ಈರಪ್ಪ,

2. ಲಕ್ಷ್ಮೀದೇವಮ್ಮ ಕೋಂ ಬೈಯಣ್ಣ,

1. ನೀವು ಮೇಲಿ ಓದಿ ಹೇಳಿದ ಮತ್ತು ವಿವರಿಸಿದ ದೋಷಾರೋಪಣೆಯನ್ನು ಅರ್ಥೈಸಿಕೊಂಡಿರುವಿರೋ ?

ಉತ್ತರಃ

ಆರೋಪಿ-1

ಆರೋಪಿ-2

2. ಮೇಲೆ ಮಾಡಿದ ಆಪಾಧನೆಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ?

ಉತ್ತರಃ

ಆರೋಪಿ-1

ಆರೋಪಿ-2

(ಆರೋಪಿಯ ವಿಚಾರಣೆಯನ್ನು ನನ್ನ ಹಾಜರಾತಿಯಲ್ಲಿ ತೆಗೆದುಕೊಂಡು, ಆಪಾಧಾನೆಗಳನ್ನು ಅವರಿಗೆ ವಿವರವಾಗಿ ಓದಿ ಹೇಳಿದ ಮೇಲೆ ಅದನ್ನು ನನ್ನ ವೈಯಕ್ತಿಕ ಸುನಾವಣೆಯಲ್ಲಿ ದಾಖಲಿಸಿದ್ದು ಆಪಾಧನೆಗಳು ಪೂರ್ಣಶಃ ಸರಿಯಾದ ಹೇಳಿಕೆಯಾಗಿದೆ.)

**ಸ್ಥಳಃ ಚಿಂತಾಮಣಿ.**

**ದಿನಾಂಕಃ** 18-06-2025. **ಸಹಿ/-**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಚಿಂತಾಮಣಿ.**

ಆರೋಪಿತರ ಸಹಿಃ